# ನಕಲಿ ಸುದ್ದಿ ತಡೆಗೆ ಗೂಗಲ್ ಲೇಬಲ್!

■ **ಶಶಿಕುಮಾರ್ ಸಿ.**

ಸಾಮಾಜಿಕ ತಾಣಗಳ ಬಳಕೆ ದಿನೇ ದಿನೇ ವ್ಯಾಪಕವಾಗುತ್ತಲೇ ಇದೆ. ಇದರಿಂದ ಅನುಕೂಲ ಮತ್ತು ಅನಾನುಕೂಲ ಎರಡೂ ಅಷ್ಟೇ ವ್ಯಾಪಕವಾಗಿ ವ್ಯಾಪಿಸುತ್ತಿದೆ. ಸಾಮಾಜಿಕ ಜಾಲತಾಣ ಬಳಕೆಯಿಂದ ನಕಲಿ ಮತ್ತು ಸುಳ್ಳು ಸುದ್ದಿಗಳು ತುಸು ಹೆಚ್ಚೇ ಸದ್ದು ಮಾಡುತ್ತಿವೆ. ಇದನ್ನು ತಡೆಗಟ್ಟಲು ಗೂಗಲ್ ಹೊಸ ಲೇಬಲ್ ಅನ್ನು ಪರಿಚಯಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ನಿಖರವಲ್ಲದ ಸುದ್ದಿಗಳನ್ನೇ ನೈಜವೆಂದು ನಂಬುವ ಬಹುದೊಡ್ಡ ವರ್ಗವು ನಮ್ಮ ನಡುವೆಯೇ ಇದೆ. ತಾವೂ ನಂಬುವುದರ ಜೊತೆಗೆ ಇತರರಿಗೂ ಆ ಸುಳ್ಳು ಮಾಹಿತಿಯನ್ನು ಹಂಚಿ ಅವರನ್ನೂ ನಂಬುವಂತೆ ಮಾಡುತ್ತಿದೆ. ಇದರಿಂದ ನಾನಾ ಸಮಸ್ಯೆಗಳು ತಲೆದೋರುತ್ತಿವೆ. ಉದಾಹರಣೆಗೆ ಸಮಾಜದ ಸ್ವಾಸ್ಥ್ಯ ಕದಡುವ, ದಿಕ್ಕು ತಪ್ಪಿಸುವ ಹುನ್ನಾರ, ಕೋಮುಗಲಭೆ. ಕೋಮುಗಲಭೆಯಂತಹ ಘಟನೆಗಳು ಸಂಭವಿಸಲು ನಕಲಿ ಸುದ್ದಿ, ತಿರುಚಿದ ಸುದ್ದಿ, ಫೋಟೊಗಳು ಮತ್ತು ವಿಡಿಯೊಗಳೇ ಮುಖ್ಯ ಕಾರಣವಾಗುತ್ತಿವೆ. ಇಂತಹ ಅನಾಹುತಗಳು ಸಂಭವಿಸದಿರಲು ಇಂಟರ್‌ನೆಟ್ ಲೋಕದ ದಿಗ್ಗಜ ಗೂಗಲ್ ಈ ಕ್ರಮಕ್ಕೆ ಮುಂದಾಗಿದೆ.

ಇಮೇಜ್ ಸರ್ಚ್‌ನಲ್ಲಿ ಗೂಗಲ್ ಫ್ಯಾಕ್ಟ್ ಚೆಕ್ ಎನ್ನುವ ಅಂಶವನ್ನು ಅದು ಸೇರಿಸಿದ್ದು, ವೈರಲ್ ಆದ ಮತ್ತು ಬಹುತೇಕ ಸಂದರ್ಭದಲ್ಲಿ ತಿರುಚಿದ ಚಿತ್ರಗಳು ಕಂಡುಬಂದರೆ, ಅವುಗಳ ಮೇಲೆ ಫ್ಯಾಕ್ಟ್ ಚೆಕ್ಡ್ ಎನ್ನುವ ಲೇಬಲ್ ತಾನಾಗಿಯೇ ಕೂರುತ್ತದೆ. ಅಲ್ಲದೆ, ಅಂತಹ ಚಿತ್ರಗಳ ಮೂಲ ಹುಡುಕಿ ಅದರ ನೈಜತೆ ಬಗ್ಗೆ ಸಾಮಾಜಿಕ ಜಾಲತಾಣಗಳ ಬಳಕೆದಾರರಿಗೆ ಮಾಹಿತಿ ನೀಡಲಿದೆ. ■

# ವಿಂಡೋಸ್ 10; ಅಪ್‌ಗ್ರೇಡ್‌ಗೆ ಮತ್ತೆ ಅವಕಾಶ

ಕೆಲ ತಿಂಗಳುಗಳ ಹಿಂದೆ ಮೈಕ್ರೊಸಾಫ್ಟ್ ಕಂಪನಿಯು 'ವಿಂಡೋಸ್ 10' ಅನ್ನು ಉಚಿತವಾಗಿ ಅಪ್‌ಗ್ರೇಡ್ ಮಾಡಿಕೊಳ್ಳಲು ತನ್ನ ಬಳಕೆದಾರರಿಗೆ ಅವಕಾಶವನ್ನು ಕಲ್ಪಿಸಿತ್ತು. ಅದಾಗ್ಯೂ ಸಾಕಷ್ಟು ಮಂದಿ ತಮ್ಮ ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳಲ್ಲಿ ಈ ಆಪರೇಟಿಂಗ್ ಸಿಸ್ಟಂ (ಒಎಸ್) ಸಾಫ್ಟ್‌ವೇರ್ ಅನ್ನು ಅಪ್‌ಗ್ರೇಡ್ ಮಾಡಿರಲಿಲ್ಲ. ಹೀಗಾಗಿಯೇ ಬಳಕೆದಾರರ ಹಿತದೃಷ್ಟಿಯಿಂದ ಮತ್ತೊಮ್ಮೆ 'ವಿಂಡೋಸ್ 10' ಅನ್ನು ಉಚಿತವಾಗಿ ಅಪ್‌ಗ್ರೇಡ್ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿದೆ.

ಮೈಕ್ರೊಸಾಫ್ಟ್ ವಿಂಡೋಸ್ 7, ವಿಂಡೋಸ್ 8.1 ಹೋಮ್ ಮತ್ತು ಪ್ರೊ, ವಿಂಡೋಸ್ 7 ಮತ್ತು 8 ಬಳಕೆದಾರರು ತಮ್ಮ ಒಎಸ್ ಅನ್ನು 'ವಿಂಡೋಸ್ 10'ಗೆ ಅಪ್‌ಗ್ರೇಡ್ ಮಾಡಿಕೊಳ್ಳಬಹುದು. ವಿಂಡೋಸ್ 7 ಒಎಸ್‌ಗೆ ಅಧಿಕೃತವಾಗಿ ಮೈಕ್ರೊಸಾಫ್ಟ್ ಬೆಂಬಲ ನಿಂತಿದ್ದು, ಅದಕ್ಕೆ ಪರ್ಯಾಯವಾಗಿ 'ವಿಂಡೋಸ್ 10'ಗೆ ಅಪ್‌ಗ್ರೇಡ್ ಮಾಡಿಕೊಳ್ಳಬಹುದು.



## ಬ್ಯಾಕ್‌ಅಪ್ ಇರಲಿ!

ಯಾವುದೇ ಹಳೆಯ ಒಎಸ್ ಅನ್ನು ವಿಂಡೋಸ್ 10ಕ್ಕೆ ಅಪ್‌ಗ್ರೇಡ್ ಮಾಡುವಾಗ ಬಳಕೆದಾರರು ತಮ್ಮ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ನಲ್ಲಿರುವ ಫೈಲ್‌ಗಳ ಬ್ಯಾಕ್‌ಅಪ್ ಅನ್ನು ಇಟ್ಟುಕೊಳ್ಳುವುದು ಸೂಕ್ತ. ಯಾಕೆಂದರೆ, ವಿಂಡೋಸ್ ಅಪ್‌ಗ್ರೇಡ್ ಮಾಡುವ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ನಲ್ಲಿರುವ ಫೈಲ್‌ಗಳೆಲ್ಲವೂ ಡಿಲೀಟ್ ಆಗುತ್ತವೆ. ಪೆನ್‌ಡ್ರೈವ್, ಎಕ್ಸ್‌ಟರ್ನಲ್ ಹಾರ್ಡ್ ಡಿಸ್ಕ್‌ನಲ್ಲಿ ಸೇವ್ ಮಾಡಿ.

ನಿಮ್ಮ ಕಂಪ್ಯೂಟರ್‌ನಲ್ಲಿ ಅಧಿಕೃತ ಮೈಕ್ರೊಸಾಫ್ಟ್ Windows 7 ಅಥವಾ Windows 8.1 ಅಥವಾ Windows 8.1 Home ಅಥವಾ Pro ಆವೃತ್ತಿ ಇರುವುದನ್ನು ಖಚಿತಪಡಿಸಿಕೊಳ್ಳಿ.

## ಅಪ್‌ಗ್ರೇಡ್ ಹೇಗೆ?

'ವಿಂಡೋಸ್ 10' ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಆಗಿ, 'ಕ್ರಿಯೇಟ್ ವಿಂಡೋಸ್ 10 ಇನ್‌ಸ್ಟಾಲೇಷನ್ ಮೀಡಿಯಾ' ಎಂಬ ಆಯ್ಕೆಯ ಮೇಲೆ ಕ್ಲಿಕ್ಕಿಸಿ. ನಂತರ ತೆರೆದುಕೊಳ್ಳುವ ಡೌನ್‌ಲೋಡ್ ಟೂಲ್ ಮೇಲೆ ಕ್ಲಿಕ್ಕಿಸಿ, ರನ್ ಆಯ್ಕೆಯನ್ನು ಒತ್ತಿ. ಕೆಲ ಕ್ಷಣಗಳ ಬಳಿಕ ಅಪ್‌ಗ್ರೇಡ್ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಬಳಿಕ ಅಪ್‌ಗ್ರೇಡ್ ದಿಸ್ ಪಿಸಿ ಎಂಬ ಆಯ್ಕೆಯನ್ನು ಕ್ಲಿಕ್ ಮಾಡಿ ಪರದೆಯ ಮೇಲೆ ಕಾಣುವ ಸೂಚನೆಗಳನ್ನು ಪಾಲಿಸಿ. ಅಪ್‌ಗ್ರೇಡ್ ಪ್ರಕ್ರಿಯೆ ಮುಗಿದ ಬಳಿಕ, ಸೆಟ್ಟಿಂಗ್ಸ್ ಅಪ್‌ಡೇಟ್ ಮತ್ತು ಸೆಕ್ಯುರಿಟಿ ಆಯ್ಕೆಗೆ ಹೋಗಿ ಅಲ್ಲಿ ಕಾಣುವ ಆಕ್ಟಿವೇಷನ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಅಪ್‌ಗ್ರೇಡ್ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ■


ॐ ✝ ☪ ಸರ್ವೇಜನಃ ಸುಖಿನೋ ಭವಂತು ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.